H.K. Patil (Minister for RDPR)

A) State Level Scheme Sanctioning Committee have approved the PSR of Pavagada taluk regional drinking water supply scheme at a cost of Rs. 1353.69Cr, with Tungabhadra reservoir as source.

B) **And C)** Hon'ble High Court has ordered to implement the said scheme early in the WP No:32420/2011. Under this regional drinking water supply scheme Pavagada, Challakere and Molakalmuru taluk rural habitations, especially all the excess fluoride affected habitations of Pavagada Taluk are proposed to be covered. Government intends to implement and complete this scheme within the stipulated time. In this connection, commitment of Government to take up the said regional drinking water scheme has already been announced vide para 315 of 2015-16 Budget Speech.

ಆರ್‌ಎಂಎಸ್‌ಎ ಯೋಜನೆಯಡಿ ಶಾಲಾ ಕೊಠಡಿಗಳು

33(2943); ಶ್ರೀ ಮುನಿರಾಜು ಎಸ್. (ದಾಸರಹಳ್ಳಿ)

ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವಾಪ್ತಿಯಲ್ಲಿ ಬರುವ ಸರ್ಕಾರಿ ಪ್ರೌಢ ಶಾಲೆ, ದಾಸರಹಳ್ಳಿ ಈ ಶಾಲೆಗೆ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (RMSA) ವತಿಯಿಂದ ಕೊಠಡಿಗಳು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಈ ಕೊಠಡಿ ನಿರ್ಮಾಣ ಕಾಮಗಾರಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು;

ಇ) ಸದರಿ ಕೊಠಡಿ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಲು ಕಾರಣವೇನು;

ಈ) ಸದರಿ ಕೊಠಡಿಗಳ ಕಾಮಗಾರಿ ಕೆಲಸ ಯಾವಾಗ ಪ್ರಾರಂಭವಾಗಲಿದೆ; ಯಾವ ಅವಧಿಯೊಳಗಾಗಿ ಈ ಕಾಮಗಾರಿ ಪೂರ್ಣಗೊಳ್ಳಲಿದೆ;

ಉ) ಈ ಕೊಠಡಿಗಳ ಕಾಮಗಾರಿ ಇನ್ನೆಷ್ಟು ದಿನಗಳಲ್ಲಿ ಪೂರ್ಣಗೊಳ್ಳಲಿದೆ?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ದಾಸಠಹಳ್ಳಿ ಪ್ರೌಢ ಶಾಲೆಯ ಕೊಠಡಿಗಳ ಕಾಮಗಾರಿಗೆ ರೂ. 49.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.

ಇ)

1) ಆಟದ ಮೈದಾನದ ಒಂದು ಬದಿಯಲ್ಲಿ ಕಟ್ಟಡದ ಕಾಮಗಾರಿಗಾಗಿ ಗುದ್ದಲಿ ಪೂಜೆ ಮಾಡಲಾಗಿತ್ತು, ಆದರೆ ಆ ಸ್ಥಳದಲ್ಲಿ ಪಾಯ ಅಗೆದಾಗ ಆಳವಾದ ಗುಂಡಿಗೆ ನಗರದ ಕಸ–ಕಡ್ಡಿ, ಕಲ್ಲು–ಮಣ್ಣು ತುಂಬಿ ಸಮತಟ್ಟು ಮಾಡಲಾಗಿರುವುದನ್ನು ಕಂಡು ಬಂದಿದ್ದು, ಪಾಯವು ಸುಮಾರು 10 ಅಡಿ ಆಳಕ್ಕೆ ಅಗೆದರು ಇದೆ ರೀತಿಯ ಕಸ–ಕಡ್ಡಿ ತುಂಬಿಕೊಂಡಿರುವುದು ಕಂಡು ಬಂದಿರುತ್ತದೆ. ಆದರಿಂದ ಬೇರೆ ವಿನ್ಯಾಸವನ್ನು ಪಡೆಯುವ ಕಾರಣದಿಂದ ಕಾಮಗಾರಿ ಸ್ಥಗಿತಗೊಂಡಿರುತ್ತದೆ.
2) ನಂತರ ಸ್ಥಳೀಯ ಪೋಷಕರು, ಮೇಲ್ದರ್ಜೆಗೇರಿಸಿದ ನಿವೇಶನವು ಸೇರಿದಂತೆ ಶಾಲಾ ಆವರಣ ಮಕ್ಕಳಿಗೆ ಕ್ರೀಡಾಂಗಣಕ್ಕೆ ಅವಶ್ಯವಾಗಿಬೇಕಾಗಿರುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಕಾಮಗಾರಿಯನ್ನು ನಿಲ್ಲಿಸಲು ಕೋರಿರುತ್ತಾರೆ. ಇದರಿಂದ ಕಾಮಗಾರಿ ಸ್ಥಗಿತಗೊಂಡಿರುತ್ತದೆ.

3) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪಯೋಜನಾ ಸಮನ್ವಯಾಧಿಕಾರಿಗಳು ಮತ್ತು ಅಭಿಯಂತರರು ಒಟ್ಟಿಗೆ ಸೇರಿ ಪೋಷಕರೊಂದಿಗೆ ಚರ್ಚಿಸಿ, ಗುರುತಿಸಿದ ನಿವೇಶನದಲ್ಲೇ ಕಾಮಗಾರಿಯನ್ನು ಪ್ರಾರಂಭಿಸಲು ಸ್ಥಳೀಯರನ್ನು ಒಪ್ಪಿಸಲಾಗಿರುತ್ತದೆ.

ಈ ಮೇಲಿನ ವಿನ್ಯಾಸ ಹೊಸದಾಗಿ ಸಿದ್ದಪಡಿಸಲು ಹಾಗೂ ಪೋಷಕರೊಂದಿಗೆ ಚರ್ಚಿಸಿ ಒಟ್ಟು ಅಭಿಪ್ರಾಯಕ್ಕೆ ಬರುವ ಕಾರಣಗಳಿಂದಾಗಿ ಕಾಮಗಾರಿಯು ಸ್ಥಗಿತಗೊಂಡಿರುತ್ತದೆ.

ಈ) ಸದರಿ ಕೊಠಡಿ ವಿನ್ಯಾಸದ ನಕ್ಷೆಯನ್ನು ಸಂಬಂಧಿಸಿದ ಗುತ್ತಿಗೆದಾರರಿಗೆ ದಿನಾಂಕ : 07/03/2015 ರಂದು ಹಸ್ತಾಂತರಿಸಲಾಗಿರುತ್ತದೆ. ಈ ಕೊಠಡಿ ನಿರ್ಮಾಣ ಕಾರ್ಯವನ್ನು ಏಪ್ರಿಲ್ 2015ರ ಅಂತ್ಯದೊಳಗೆ ಪ್ರಾರಂಭವಾಗಲಿದ್ದು, ಡಿಸೆಂಬರ್ 2015ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಉ) ಈ ಕೊಠಡಿಗಳ ಕಾಮಗಾರಿ ಡಿಸೆಂಬರ್ 2015ರ ಒಳಗೆ ಅಂದರೆ 245 ದಿನಗಳಲ್ಲಿ ಪೂರ್ಣಗೊಳಿಸಲಾಗುವುದು.

ಸಾರ್ವಜನಿಕ ಗ್ರಂಥಾಲಯ

34(3382); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ಬೆಂಗಳೂರು ನಗರದಲ್ಲಿರುವ ಅನೇಕ ಸಾರ್ವಜನಿಕ ಗ್ರಂಥಾಲಯಗಳಲ್ಲಿ ದಿನಪತ್ರಿಕೆ, ಮಾಸಪತ್ರಿಕೆ, ಇತ್ಯಾದಿಗಳು ಕಳೆದ ಎರಡು ತಿಂಗಳಿಂದ ಸರಬರಾಜು ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣವೇನು; ಯಾವ ಯಾವ ಗ್ರಂಥಾಲಯಗಳಿಗೆ ದಿನಪತ್ರಿಕೆ ಮತ್ತು ಮಾಸ ಪತ್ರಿಕೆಗಳು ಸರಬರಾಜು ಆಗಿರುವುದಿಲ್ಲ (ವಿವರ ನೀಡುವುದು);